

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಒಂಟೆಗೆ ಕೊಟ್ಟರೇನು ಗಂಟೆಗೆ ಕೊಟ್ಟರೇನು!

"ವಿದ್ಯಯಾ ಅಮೃತಮಶ್ನುತೇ" ಎಂದರು ನಮ್ಮ ಉಪನಿಷತ್ ಕಾಲದ ಋಷಿಮುನಿಗಳು. ಈ ನುಡಿಗಟ್ಟನ್ನೇ ಮೈಸೂರು ವಿಶ್ವವಿದ್ಯಾನಿಲಯ ತನ್ನ ಲಾಂಛನದ (emblem) ಧ್ಯೇಯವಾಕ್ಯವನ್ನಾಗಿ ಮಾಡಿಕೊಂಡಿದೆ. ವಿದ್ಯೆಯಿಂದ ವ್ಯಕ್ತಿಯು ಅಮರತ್ವವನ್ನು ಸಾಧಿಸಬಲ್ಲನೆಂದು ಇದರ ತಾತ್ಪರ್ಯ. ನಮ್ಮ ಪರಮಾರಾಧ್ಯ ಗುರುವರ್ಯರಾದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು 1937 ರ ತಮ್ಮ ದಿನಚರಿ 'ಆತ್ಮನಿವೇದನೆ'ಯಲ್ಲಿ ಬರೆದ ಈ ಮುಂದಿನ ಮಾತುಗಳು ತುಂಬಾ ಮನನೀಯವಾಗಿವೆ: "ಶಿಕ್ಷಣದಲ್ಲಿ ಪರಿವರ್ತನೆಯಾಗದೆ ಜಗತ್ತಿಗೆ ಸುಖವಿಲ್ಲ. ವಿದ್ಯಾರ್ಥಿಗಳಿಗೆ ಔದ್ಯೋಗಿಕ, ವ್ಯಾವಹಾರಿಕ ಮತ್ತು ಆಧ್ಯಾತ್ಮಿಕ ಈ ಮೂರೂ ಶಿಕ್ಷಣಗಳನ್ನು ಕೊಡಬೇಕು". ಕಳೆದ ಶತಮಾನದಲ್ಲಿ ಬರೆದ ಈ ಮಾತುಗಳನ್ನೇ ಈ ಶತಮಾನದಲ್ಲಿಯೂ ಇಂದಿನ ಶಿಕ್ಷಣ ಪದ್ಧತಿಯನ್ನು ಕುರಿತು ಪುನರುಚ್ಚರಿಸಬೇಕಾಗಿರುವುದು ತೀರಾ ಶೋಚನೀಯ. ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಆಧ್ಯಾತ್ಮಿಕ ಶಿಕ್ಷಣದ ಕೊರತೆ ಎದ್ದು ಕಾಣಿಸುತ್ತಿದೆ. ಇಂದು ಶಿಕ್ಷಣ ಪಡೆಯುವ ಮೂಲ ಗುರಿ ಕೈತುಂಬಾ ಸಂಬಳ ಸಿಗುವಂತಹ ನೌಕರಿಯನ್ನು ಪಡೆಯುವುದು ಎನ್ನುವಂತಾಗಿದೆ.

ಅವಿದ್ಯೆಯು ವ್ಯಕ್ತಿಯ ಮತ್ತು ನಾಡಿನ ಮುನ್ನಡೆಗೆ ಮಾರಕ, ನಿಜ. ಆದರೆ ಇಂದಿನ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಪಡೆಯುತ್ತಿರುವ ಅರೆ ಬರೆ ವಿದ್ಯೆಯು ನಾಡಿನ ಮುನ್ನಡೆಗೆ ಸಹಾಯಕವೇನೂ ಆಗಿಲ್ಲ. ಅವಿದ್ಯಾವಂತ ಜನರು ತಮ್ಮ ಅಜ್ಞಾನ, ಅಂಧಶ್ರದ್ಧೆ, ದಟ್ಟ ದಾರಿದ್ರ್ಯಗಳಿಂದ ನಾಡಿಗೆ ಒಂದು ರೀತಿಯ ಸಮಸ್ಯೆಯಾದರೆ, ವಿದ್ಯಾವಂತರೆನಿಸಿಕೊಂಡ ಪದವೀಧರರು ತಮ್ಮ ಪೊಳ್ಳು ಪ್ರತಿಷ್ಠೆಯ ಪದವಿಗಳಿಂದ ಅರೆ ಬರೆ ಕಲಿಕೆಯಿಂದ ಭೀಕರ ನಿರುದ್ಯೋಗ ಬವಣೆಯಿಂದ ಮತ್ತೊಂದು ರೀತಿಯ ಸಮಸ್ಯೆಯಾಗಿದ್ದಾರೆ. ಹಿಂದೆಂದೂ ಕಂಡರಿಯದ ಹೊಚ್ಚ ಹೊಸ ಸಮಸ್ಯೆಗಳ ನಿರ್ಮಾತೃಗಳಾಗಿದ್ದಾರೆ. ಉದಾಹರಣೆಗೆ ಇಂದಿನ ಮದುವೆಯ ಮಾರುಕಟ್ಟೆಯಲ್ಲಿ ಪದವೀಧರ ಗಂಡುಗಳ ಬಿರುಸಿನ ವ್ಯಾಪಾರವೇ ನಡೆದಿದೆ. "ಮನೆ ಕಟ್ಟಿ ನೋಡು, ಮದುವೆ ಮಾಡಿ ನೋಡು" ಎಂಬ ಗಾದೆ ಮಾತನ್ನು ನೀವು ಕೇಳಿರಬಹುದು. ಈ ಗಾದೆ ಮಾತನ್ನು ಹಿರಿಯರು ಮಾಡಿದಾಗ ಬಹುಶಃ ವರದಕ್ಷಿಣೆಯ ಪಿಡುಗು ಇರಲಿಲ್ಲ. ಮನೆ ಕಟ್ಟುವುದಾಗಲೀ ಮದುವೆ ಮಾಡುವುದಾಗಲೀ ಎರಡೂ ತುಂಬಾ ಕಷ್ಟದ ಕೆಲಸಗಳು ಎಂಬ ಸಾಮಾನ್ಯ ಅರ್ಥದಲ್ಲಿ ಹೇಳಿದ್ದರೆಂದು ತೋರುತ್ತದೆ. ಇಂದಿನ ಬದಲಾದ ಸಾಮಾಜಿಕ ಸನ್ನಿವೇಶಗಳಲ್ಲಿ ಈ ಗಾದೆ ಮಾತಿಗೆ ಒಂದು ವಿಶೇಷಾರ್ಥ ಬಂದಿದೆ. ಇಂದು ಮನೆ ಕಟ್ಟುವುದಕ್ಕಿಂತ ಮದುವೆ ಮಾಡುವುದು ಹೆಣ್ಣುಹೆತ್ತ ತಂದೆ-ತಾಯಿಗಳಿಗೆ ಆರ್ಥಿಕವಾಗಿ ಹೊರಲಾಗದ ಹೊರೆ. ಮನೆ ಕಟ್ಟಲು ಬೇಕಾದ ಕಬ್ಬಿಣ ಸಿಮೆಂಟುಗಳ ಮಾರುಕಟ್ಟೆ ಬೆಲೆ ಕೆಲವೊಮ್ಮೆ ಕಡಿಮೆಯಾದರೂ ಆಗಬಹುದು. ಆದರೆ ಮದುವೆ ಮಾರುಕಟ್ಟೆಯಲ್ಲಿ ಗಂಡುಗಳ ಬೆಲೆ ಕಡಿಮೆಯಾಗುವ ಲಕ್ಷಣಗಳೇ ಕಾಣಿಸುತ್ತಿಲ್ಲ. ಅದು ಯಾವಾಗಲೂ ಏರುಮುಖ, ಇಳಿಮುಖ ಎಂಬುದೇ ಇಲ್ಲ. ಮದುವೆ ಮಾರುಕಟ್ಟೆಯಲ್ಲಿ recession ಮಾತೇ ಇಲ್ಲ.

ಇಂದು ನಮ್ಮ ವಿಶ್ವವಿದ್ಯಾನಿಲಯಗಳು ದುಬಾರಿ ಬೆಲೆಯ ಗಂಡುಗಳನ್ನು ತಯಾರು ಮಾಡುವ ಕಾರ್ಖಾನೆಗಳಾಗಿವೆ. ಅದರಲ್ಲಿಯೂ ವಿವಿಧ ದರ್ಜೆಯ ಗಂಡುಗಳು. ಅವುಗಳಲ್ಲಿ ಬಹಳ ದುಬಾರಿ ಬೆಲೆಯ ಗಂಡೆಂದರೆ ಮೆಡಿಕಲ್ ಓದಿದ ಗಂಡು. ಏನಿಲ್ಲೆಂದರೂ ಹತ್ತಾರು ಲಕ್ಷ ರೂ. ಕಿಮ್ಮತ್ತಿನ ಗಂಡು ಅದು! ಇನ್ನು ಎರಡನೆಯ ದರ್ಜೆಯ ಗಂಡು ಇಂಜಿನಿಯರಿಂಗ್ ಗಂಡು. ಸಾಫ್ಟ್‌ವೇರ್ ಉದ್ದಿಮೆ ಹೆಚ್ಚಿದಂತೆ ಅದೂ ಸಹ ಮೊದಲನೇ ದರ್ಜೆಯ ಗಂಡಾಗಲು ಸೆಣಸಾಡುತ್ತಿದೆ. ಇವುಗಳಲ್ಲಿ ಯಾವುದನ್ನಾದರೂ ಅಳಿಯನನ್ನಾಗಿಸಿಕೊಳ್ಳಲು ಹೆಣ್ಣು ಹೆತ್ತವರ ಹಣಾಹಣಿ. ಆಸ್ತಿಪಾಸ್ತಿಗಳ ಹರಾಜು, ಬ್ಯಾಂಕುಗಳಲ್ಲಿ ಆಭರಣಗಳ ಅಡವು. ಆದರೂ ಮದುವೆಯಾದ ಮೂರು ತಿಂಗಳಿಗೇ ಅಳಿಯನ ಹೊಸ ಬೇಡಿಕೆಯೊಂದಿಗೆ ಮಗಳು ತವರುಮನೆ ಸೇರಿದರೆ

ಆಶ್ಚರ್ಯವೇನೂ ಇಲ್ಲ. ಇವೆರಡೂ ಗಂಡುಗಳಿಗಿಂತ ಅಗ್ಗದ ಬೆಲೆಯಲ್ಲಿ ಸಿಗಬಹುದಾದ ಮೂರನೇ ದರ್ಜೆಯ ಪದವೀಧರ ಗಂಡುಗಳೂ ಇವೆ. ಅವುಗಳಲ್ಲೊಂದೆಂದರೆ 'ಎಂ.ಎ.' ಓದಿದ ಗಂಡು. ಹಳ್ಳಿಯ ಒಂದು ಕರೆವೆಮ್ಮೆಯು ಒಪ್ಪೊತ್ತಿನ ಹಾಲಿನಿಂದ ಸಂಸಾರವನ್ನು ಎಷ್ಟೋ ಸುಖವಾಗಿಡಬಲ್ಲುದು. ವಿಶ್ವವಿದ್ಯಾನಿಲಯದ ಈ 'ಎಮ್ಮೆ'ಯು ಉದ್ಯೋಗಾವಕಾಶಗಳಿಲ್ಲದೆ ಹೆಣ್ಣುಹೆತ್ತವರನ್ನು ನೌಕರಿಗಾಗಿ ನಿರಂತರ ಗೋಳಿಡಿಸುವ ಗೊಡ್ಡೆಮ್ಮೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಅಲೆಗ್ಸಾಂಡರನಂತೆ ಅನೇಕ ಬಾರಿ ಪರೀಕ್ಷೆಯಲ್ಲಿ ದಂಡಯಾತ್ರೆ ಹೊಡೆದೂ ಡಿಗ್ರಿ ಗಿಟ್ಟಿಸಲಾಗದ ಹುರಿಮೀಸೆಯ ಹುಡುಗನಿಗೂ ಬೆಲೆಯಿಲ್ಲದಿಲ್ಲ. ಅಜ್ಜ ಅಜ್ಜಿಗಳ ಕಾಟಕ್ಕೆ ಮದುವೆಗೆ ಸಿದ್ಧವಾಗಿ ಆಹ್ವಾನ ಪತ್ರಿಕೆಯನ್ನು ಅಚ್ಚುಹಾಕಿಸುವಾಗ ತನ್ನ ಹೆಸರಿನ ಮುಂದೆ ತಾನು ಪಡೆಯದ ಡಿಗ್ರಿಗೆ ಬ್ರಾಕೆಟ್ ಸುತ್ತುವ ಈ ಪದವಿಯ ಗೀಳಿನ ಗಂಡು, ನೇಗಿಲ ಹಿಡಿಯುವ ಹಳ್ಳಿಯ ಹೈದನಿಗಿಂತ ತಾನು ಹೆಚ್ಚೆಂದೇ ಮೀಸೆ ಹುರಿಗೊಳಿಸುತ್ತಾನೆ.

ಎಲ್ಲಾ ದಾನಗಳಲ್ಲಿಯೂ 'ಕನ್ಯಾದಾನ' ವನ್ನು ಬಹು ಶ್ರೇಷ್ಠ ದಾನವೆನ್ನುವ ಪ್ರಾಚೀನ ಧರ್ಮಶಾಸ್ತ್ರಕಾರರು ಈ ದಾನವನ್ನು ಅಷ್ಟು ಸುಲಭವಾಗಿ ಪಡೆಯಲು ಒಪ್ಪದ ಪದವೀಧರರು ಇಂದು ಹುಟ್ಟುತ್ತಾರೆಂದು ಊಹಿಸಿರಲಿಲ್ಲವೆಂದು ತೋರುತ್ತದೆ. ಹಿಂದಿನ ಕಾಲದಲ್ಲಿ ಹೆಣ್ಣುಹೆತ್ತವರಿಗೆ ಗಂಡಿನವರು 'ಕನ್ಯಾಶುಲ್ಕ' ಕೊಡಬೇಕಾಗಿತ್ತು. ಅದಕ್ಕೆ ಹಳ್ಳಿಭಾಷೆಯಲ್ಲಿ 'ತೆರ ಕೊಡುವುದು' ಎಂದು ಕರೆಯುತ್ತಿದ್ದರು. "ಕಡಿಮೆ ತೆರ ಅಂದ್ರೆ ಕುರುಡಿ ಹೆಣ್ಣು" ಎನ್ನುತ್ತಿದ್ದ ಕಾಲವದು. ಒಳ್ಳೆಯ ರೂಪವತಿ, ಗುಣವತಿ ಹೆಣ್ಣನ್ನು ಪಡೆಯಲು ಹೆಚ್ಚು ಹೆಚ್ಚು 'ಕನ್ಯಾಶುಲ್ಕ' ಕೊಡಬೇಕಾಗುತ್ತಿತ್ತು. ಹೆಣ್ಣುಹೆತ್ತವರ ಮನೆಗೆ ಅಲೆದು ಅಲೆದು ಕಾಲಿನ ಚಪ್ಪಲಿ ಸವೆದುಹೋಗುತ್ತಿತ್ತು ಎಂದು ಹೇಳುವ ಹಿರಿಯರು ಹಳ್ಳಿಗಳಲ್ಲಿ ಈಗಲೂ ಜೀವಂತ ಇದ್ದಾರೆ. ಆಗ ಹೆಣ್ಣುಹೆತ್ತವರಿಗೆ ವರದಕ್ಷಿಣೆಯ ಚಿಂತೆ ಇರುತ್ತಿರಲಿಲ್ಲ. ಅವರಿಗಿದ್ದ ಚಿಂತೆಯೇ ಬೇರೆ. ಅದನ್ನು ಸಂಸ್ಕೃತದ ಅಜ್ಞಾತ ಕವಿಯೊಬ್ಬ ಹೃದಯಂಗಮವಾಗಿ ಚಿತ್ರಿಸಿದ್ದಾನೆ:

**ಪುತ್ರೀತಿ ಜಾತಾ ಮಹತೀಹ ಚಿಂತಾ**
**ಕಸ್ಮೈ ಪ್ರದೇಯೇತಿ ಮಹಾನ್ ವಿತರ್ಕಃ।**
**ದತ್ತಾ ಸುಖಂ ಪ್ರಾಪ್ಸ್ಯತಿ ವಾ ನವೇತಿ**
**ಕನ್ಯಾಪಿತೃತ್ವಂ ಖಲು ನಾಮ ಕಷ್ಟಂ॥**

**(ಮಗಳು ಹುಟ್ಟಿದಳೆಂದರೆ ಹುಟ್ಟುವುದು ಚಿಂತೆ**
**ಮುಂದೆ ಯಾರಿಗೆ ಧಾರೆಯೆರೆದು ಕೊಡಬೇಕೆಂಬುದೇ ಆ ಚಿಂತೆ**
**ಕೊಟ್ಟಮನೆಯಲ್ಲಿ ಸುಖವಾಗಿರುವಳೇ ಎಂಬ ಚಿಂತೆ**
**ಹೆಣ್ಣುಹೆತ್ತವರಿಗೆ ಉಂಟೆ ಇದಕ್ಕಿಂತ ದೊಡ್ಡ ಚಿಂತೆ!)**

ಹಿಂದಿನ ಕಾಲದ ಈ ಸಂಸ್ಕೃತ ಸೂಕ್ತಿಗೆ ಇಂದಿನ (ಅ)ನಾಗರಿಕ ಸಮಾಜ ಹೊಸ ವ್ಯಾಖ್ಯಾನವನ್ನೇ ಬರೆದಿದೆ. ಇಂದು ಹೆಣ್ಣುಹೆತ್ತವರ ದೈನ್ಯತೆ, ಅನಿವಾರ್ಯವಾಗಿ ಮಾಡಬೇಕಾದ ವರದಕ್ಷಿಣೆ ವರೋಪಚಾರ, ಗಂಡಿನವರ ಗತ್ತುಗೈರತ್ತುಗಳಿಂದ ಅವರು ಅನುಭವಿಸಬೇಕಾದ ವೇದನೆ ವರ್ಣಿಸಲಸದಳ. ಮಗಳನ್ನು ನೋಡಿಕೊಂಡು ಹೋದಮೇಲೆ ಗಂಡಿನವರ ಒಪ್ಪಿಗೆಗಾಗಿ ತುದಿಗಾಲ ಮೇಲೆ ನಿಂತು ಕಾಯುತ್ತಿರುತ್ತಾರೆ. ಕಂಡ ಕಂಡ ದೇವರಿಗೆಲ್ಲಾ ದಿಂಡುರುಳು ಬಿದ್ದು ಹರಕೆ ಹಾಕಿಕೊಳ್ಳುತ್ತಿರುತ್ತಾರೆ. ಆದರೆ 'ದೇವರು ವರ ಕೊಟ್ಟರೂ ಪೂಜಾರಿ ವರ ಕೊಡಲಿಲ್ಲ' ಎಂಬಂತೆ ಆ ಕಡೆಯಿಂದ ಬರುವ ನಿರಾಶಾದಾಯಕ ಉತ್ತರ: "ನಿಮ್ಮ ಮಗಳನ್ನೇ ನಮ್ಮ ಮನೆಯ ಸೊಸೆಯನ್ನಾಗಿ ಮಾಡಿಕೊಳ್ಳಬೇಕೆಂದು ಬಹಳ ಆಸೆ ಇತ್ತು. ಆದರೆ ಏನು ಮಾಡುವುದು ನಮ್ಮೂರ ಹನುಮಪ್ಪದೇವರು ಅಪ್ಪಣೆ ಕೊಡಲಿಲ್ಲ!" ವಾಸ್ತವವಾಗಿ ಅದು ಆ ಊರಿನ ಹನುಮಪ್ಪದೇವರ ನಿರಾಕರಣೆಯಲ್ಲ. ಆ ಮನೆಯ 'ಹನುಮಪ್ಪ' ಕೇಳಿದಷ್ಟು ವರದಕ್ಷಿಣೆಯನ್ನು ಕೊಡಲು ಹೆಣ್ಣಿನವರು ಒಪ್ಪದೇ ಇರುವುದು ಕಾರಣ. ಅವರು ಕೇಳಿದಷ್ಟು ವರದಕ್ಷಿಣೆಯನ್ನು ಕೊಡಲು ಇವರು ಸಿದ್ಧರಾದರೆ ಆ 'ಹನುಮಪ್ಪ' ಯಾವ ಕಡೆಗಾದರೂ ಹೂವನ್ನು ಕೊಡುತ್ತಾನೆ. ಹೆಚ್ಚು ಹೆಚ್ಚು ಹಣ ಕೊಡುವವರ ಕಡೆ ವಾಲುತ್ತಾ ಹೋಗುತ್ತಾನೆ.

ಸುಮಾರು ಮೂವತ್ತು ವರ್ಷಗಳ ಹಿಂದಿನ ಒಂದು ಘಟನೆ. ಆಗಿನ್ನೂ ನಮ್ಮ ಗುರುವರ್ಯರು ಜೀವಂತವಾಗಿದ್ದರು. ಹರಿಹರದಲ್ಲಿ ಯಾವುದೋ ವಿಷಯವಾಗಿ ನಮ್ಮ ಸಮ್ಮುಖದಲ್ಲಿ ಶಿಷ್ಯರ ಒಂದು ಸಭೆ ಸೇರಿತ್ತು. ಪ್ರಾಸಂಗಿಕವಾಗಿ ವರದಕ್ಷಿಣೆ ವಿಚಾರ ಪ್ರಸ್ತಾಪಗೊಂಡಿತು. ಅದನ್ನು ಕಟುವಾಗಿ ಟೀಕಿಸಿದ ನಮ್ಮ ಮಾತುಗಳನ್ನು ಕೇಳಿ ಶಿಷ್ಯರೊಬ್ಬರು ಮೇಲೆದ್ದು ಒಂದೆರಡು ದಿನಗಳ ಹಿಂದೆಯಷ್ಟೇ ತಮ್ಮೂರಿನ ಗೌಡರೊಬ್ಬರು ತಮ್ಮ ಮಗನ ಮದುವೆ ಮಾತುಕತೆಗೆ ಹೋದಾಗ ಬೀಗರಿಂದ ಹೇರಳವಾಗಿ ವರದಕ್ಷಿಣೆ ಕೇಳಿರುವ ವಿಚಾರವನ್ನು ಅರಿಕೆಮಾಡಿಕೊಂಡರು. ಆ ಗೌಡರೂ ಸಹ ಸಭೆಯಲ್ಲಿದ್ದರು. ಅವರಿಗೆ ಎಲ್ಲರೆದುರಿಗೆ ಮರ್ಯಾದೆ

ಸುಮಾರಾಯಿತು. ಅವರು ಕೂಡಲೇ ನಮ್ಮ ಹತ್ತಿರ ಬಂದು ತಮ್ಮ ಅಪ್ಪಣೆಯಂತೆ ಬೀಗರಿಂದ ವರದಕ್ಷಿಣೆ ತೆಗೆದುಕೊಳ್ಳುವುದಿಲ್ಲವೆಂದು ಅಡ್ಡಬಿದ್ದು ವಿನಂತಿಸಿಕೊಂಡರು. ಗೌಡರ ಮನಃಪರಿವರ್ತನೆಯನ್ನು ನೋಡಿ ಸಭೆಯಲ್ಲಿದ್ದವರೆಲ್ಲಾ ಚಕಿತಗೊಂಡು ಸಂತೋಷದಿಂದ ಕರತಾಡನ ಮಾಡಿದರು. ಗೌಡರು ಮೇಲೆದ್ದು ಕೈಜೋಡಿಸಿ ಮೆಲುದನಿಯಲ್ಲಿ ಮತ್ತೊಂದು ವಿನಂತಿ ಸಲ್ಲಿಸಿದರು. "ನಮ್ಮ ಬೀಗರು ಬಹಳ ಶ್ರೀಮಂತರು. ಮೇಲಾಗಿ ಜಿಪುಣರು. ನಾನು ವರದಕ್ಷಿಣೆಯನ್ನು ತೆಗೆದುಕೊಳ್ಳುವುದಿಲ್ಲವೆಂದರೆ ಅವರು ಯಾರಿಗೂ ಕೈ ಎತ್ತಿ ಕೊಡುವವರಲ್ಲ. ನಾನು ಕೇಳಿದ ವರದಕ್ಷಿಣೆ ಹಣವನ್ನು ಅವರಿಂದ ತಾವು ಮಠಕ್ಕೆ ವಾಗ್ದಾನ ಮಾಡಿಸಿಕೊಳ್ಳುವುದಾದರೆ ನನ್ನದೇನೂ ಅಭ್ಯಂತರವಿಲ್ಲ" ಎಂದರು ಕರತಾಡನದ ಅಬ್ಬರದಲ್ಲಿ ಗೌಡರ ಈ ಅಹವಾಲು ಸಭೆಯಲ್ಲಿದ್ದವರಿಗೆ ಕೇಳಿಸಲಿಲ್ಲ. ಮದುವೆಗೆ ಬಂದಾಗ ಮಠದ ಯಾವುದಾದರೂ ಪುಣ್ಯಕಾರ್ಯಕ್ಕೆ ನಿಮ್ಮ ಬೀಗರಿಂದ ವಾಗ್ದಾನ ಪಡೆಯುವ ಪ್ರಯತ್ನ ಮಾಡೋಣವೆಂದು ಹೇಳಿ ಸಿರಿಗೆರೆಗೆ ಹಿಂದಿರುಗಿದೆವು. ಇಂದೋ ನಾಳೆಯೋ ಆ ಗೌಡರು ತಮ್ಮ ಮಗನ ಮದುವೆಗೆ ನಮ್ಮನ್ನು ಆಹ್ವಾನಿಸಲು ಮಠಕ್ಕೆ ಬರುತ್ತಾರೆಂಬ ನಿರೀಕ್ಷೆಯಲ್ಲಿ ಈ ವಿಷಯ ಮರೆತೇಹೋಯಿತು. ಕೆಲವು ದಿನಗಳ ನಂತರ ಸಿರಿಗೆರೆಯ ಸಮೀಪದ ಆಶ್ರಮದಲ್ಲಿ ವಿಶ್ರಾಂತಿಜೀವನ ನಡೆಸುತ್ತಿದ್ದ ನಮ್ಮ ಗುರುವರ್ಯರ ದರ್ಶನವನ್ನು ಪಡೆಯಲು ಹೋದಾಗ ಅವರ ಹತ್ತಿರ ಇದ್ದ ಒಂದು ಮದುವೆ ಆಮಂತ್ರಣ ಪತ್ರಿಕೆ ನಮ್ಮ ಕಣ್ಣಿಗೆ ಬಿತ್ತು. ಅದನ್ನು ಕೈಗೆತ್ತಿಕೊಂಡು ನೋಡಿದರೆ ಅದು ಆ ಗೌಡರ ಮಗನ ಮದುವೆಯ ಆಹ್ವಾನ ಪತ್ರಿಕೆಯಾಗಿತ್ತು. ಗೌಡರು ನಮ್ಮನ್ನು ಆಹ್ವಾನಿಸದೆ ನಮ್ಮ ಗುರುವರ್ಯರನ್ನು ಆಹ್ವಾನಿಸುವ ಜಾಣತನ ಮಾಡಿದ್ದರು. ಮಾತಿನ ಪ್ರಸಂಗದಲ್ಲಿ ಗೌಡರ ಮಗನ ಮದುವೆಯ ದಿನವೇ ಸಮೀಪದ ಇನ್ನೊಂದು ಹಳ್ಳಿಯಲ್ಲಿ ನಮ್ಮ ಕಾರ್ಯಕ್ರಮವಿದೆಯೆಂದು ತಿಳಿದ ಗುರುವರ್ಯರು "ನಮಗೆ ಪ್ರಯಾಣಿಸಲು ದಣಿವಾಗುತ್ತದೆ. ನೀವೇ ನಮ್ಮ ಪರವಾಗಿ ಗೌಡರ ಕಾರ್ಯಕ್ರಮಕ್ಕೆ ಹೋಗಿ ಮದುಮಕ್ಕಳಿಗೆ ಆಶೀರ್ವದಿಸಿ ಬನ್ನಿ" ಎಂದು ಆಜ್ಞಾಪಿಸಿದರು. ನಮಗೆ ತುಂಬಾ ಸಂತೋಷವಾಯಿತು. ಈ 'ಸಂತೋಷದ ಸುದ್ದಿ' ಗೌಡರಿಗೆ ಹೇಗೋ ತಿಳಿಯಿತು. ಅವರು ಮಾರನೆಯ ದಿನವೇ ನಮ್ಮ ಗುರುವರ್ಯರ ಹತ್ತಿರ ಹೋಗಿ ಅಡ್ಡಬಿದ್ದು "ಬುದ್ಧಿ, ಈಗಿನ ಸ್ವಾಮಿಗಳನ್ನು ಮುಂದೆ ಯಾವಾಗಲಾದರೂ ಕರೆಸಬಹುದು, ಮಗನ ಮದುವೆಗೆ ತಾವೇ ದಯಮಾಡಿಸಬೇಕು" ಎಂದು ಹಠ ಹಿಡಿದರು. ನಮ್ಮ ಗುರುವರ್ಯರಿಗೆ ಅವನ 'ಗುಪ್ತಭಕ್ತಿ' ಏನೆಂಬುದು ಗೊತ್ತಿರಲಿಲ್ಲ. ಅವರು ಒಮ್ಮೆ ನಿರ್ಣಯ ಕೈಗೊಂಡರೆ ಯಾರು ಎಷ್ಟೇ ಹೇಳಿದರೂ ಬದಲಾಯಿಸುತ್ತಿರಲಿಲ್ಲ. ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಗೌಡರು ನಿರಾಶರಾಗಿ ಹಿಂತಿರುಗಿದರು. ಬೀಗರು ಕೊಡಲು ಬಂದ 'ವರದಕ್ಷಿಣೆ' ಹಣವನ್ನು ಮುಟ್ಟಲಿಲ್ಲ. 'ಅಳಿಯನಿಗೆ ಏನೂ ವರದಕ್ಷಿಣೆ ಕೊಡುವುದು ಬೇಡ, ನಿಮ್ಮ ಮಗಳಿಗೆ ಮಾತ್ರ ಒಡವೆಗಳನ್ನು ಮಾಡಿಸಿರಿ' ಎಂದು ವರದಕ್ಷಿಣೆಗಿಂತ ಹೆಚ್ಚಿನ ಬೆಲೆಯ ಬಂಗಾರವನ್ನು ಗೌಡರು ಪಡೆದಿದ್ದರು!

ಮದುವೆಗೆ ಹೋದಾಗ ಗೌಡರ ಈ ಜಾಣತನದ ನಡವಳಿಕೆಯ ವಿಷಯ ತಿಳಿದು ಒಂದು ರೋಚಕವಾದ ಕಥೆ ನೆನಪಾಯಿತು. ಯಾತ್ರಿಕನೊಬ್ಬ ತೀರ್ಥಯಾತ್ರೆ ಹೊರಟಿದ್ದ. ಮಾರ್ಗಮಧ್ಯೆ ವಿಶ್ರಮಿಸಿಕೊಳ್ಳಲೆಂದು ತಾನು ಪ್ರಯಾಣಿಸುತ್ತಿದ್ದ ಒಂಟೆಯನ್ನು ಮರಕ್ಕೆ ಕಟ್ಟಿ ಹಾಕಿ ತಾನೂ ಮರದ ಕೆಳಗೆ ಮಲಗಿದ. ಮಲಗೆದ್ದಮೇಲೆ ನೋಡಿದರೆ ಒಂಟೆ ಕಾಣದಾಗಿತ್ತು. ಬಹಳ ಹೊತ್ತು ಹುಡುಕಿದ. ಒಂಟೆ ಸಿಗಲಿಲ್ಲ. ಕೊನೆಗೆ ಹತಾಶನಾಗಿ 'ಕಳೆದುಹೋದ ಒಂಟೆ ಸಿಕ್ಕರೆ ಯಾರಿಗಾದರೂ ದಾನವಾಗಿ ಕೊಡುತ್ತೇನೆ' ಎಂದು ದೇವರಲ್ಲಿ ಹರಕೆ ಹಾಕಿಕೊಂಡ. ಹರಕೆ ಹಾಕಿಕೊಂಡ ಕೆಲವೇ ಕ್ಷಣಗಳಲ್ಲಿ ಒಂಟೆ ತಾನಾಗಿಯೇ ಅವನಿದ್ದಲ್ಲಿಗೆ ಬಂತು. ಯಾತ್ರಿಕನಿಗೆ ಸಂತೋಷ ಮತ್ತು ದುಃಖ ಏಕಕಾಲದಲ್ಲಿ ಉಂಟಾದವು. ಕಳೆದುಹೋದ ಒಂಟೆ ಹಿಂತಿರುಗಿ ಬಂದದ್ದಕ್ಕೆ ಸಂತೋಷ, ಇನ್ನೂ ಸ್ವಲ್ಪಹೊತ್ತು ಹುಡುಕಿದ್ದರೆ ಸಿಕ್ಕುತ್ತಿತ್ತಲ್ಲಾ, ಸಾವಿರಾರು ರೂಪಾಯಿ ಬೆಲೆಯುಳ್ಳ ಒಂಟೆಯನ್ನು ಅನ್ಯಾಯವಾಗಿ ಬೇರೆಯವರಿಗೆ ಕೊಡಬೇಕಲ್ಲಾ ಎಂಬ ದುಃಖ. ಹರಕೆಯಂತೆ ನಡೆದುಕೊಳ್ಳಲೇ ಬೇಕು, ಬೇರೆ ವಿಧಿಯಿಲ್ಲ. ಒಂದು ಉಪಾಯ ಮಾಡಿದ. ಒಂಟೆಯ ಕೊರಳಿಗೆ ಒಂದು ಗಂಟೆಯನ್ನು ಕಟ್ಟಿದ. ಹರಕೆಯಂತೆ ಒಂಟೆಯನ್ನು ದಾನವಾಗಿ ಕೊಡುವುದಾಗಿ ಘೋಷಿಸಿದ. ಆದರೆ ಒಂಟೆಯ ಕೊರಳಲ್ಲಿರುವ ಗಂಟೆಗೆ ಮಾತ್ರ ಇಂತಿಷ್ಟು ಸಾವಿರ ರೂಪಾಯಿ ಕೊಡಬೇಕೆಂದು ಷರತ್ತು ವಿಧಿಸಿದ. ಒಂಟೆಗೆ ಕೊಟ್ಟರೇನು, ಗಂಟೆಗೆ ಕೊಟ್ಟರೇನು? ಅಳಿಯನಿಗೆ ಕೊಟ್ಟರೇನು, ಮಗಳಿಗೆ ಕೊಟ್ಟರೇನು? 'ಅಳಿಯಲ್ಲಾ, ಮಗಳ ಗಂಡ!' ಎಂಬ ನಾಣ್ನುಡಿ ಬಂದದ್ದು ಇಂತಹ ಜಾಣ ಅಳಿಯ-ಮಾವಂದಿರ ಕಾರಣಕ್ಕೇ ಇರಬೇಕಲ್ಲವೇ!

18.8.2010

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑